OS 296/2022
PW-1

ಈ ದಿನ ದಿನಾಂಕಃ 30.06.2026 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ 9ನೇ ಪ್ರತಿವಾದಿ ಪರ ಶ್ರೀ ಜಿ ಆರ್ ವಕೀಲರವರಿಂದಃ**

ನನ್ನ ತಂದೆ ಸಿದ್ದಲಿಂಗಪ್ಪನವರಿಗೆ 4 ಜನ ಸಹೋದರರು ಎಂದರೆ ಸರಿ. ಸಿದ್ದಲಿಂಗಪ್ಪನವರ ಅಣ್ಣ ಬಿಷ್ಟಪ್ಪ ಎಂದರೆ ಸರಿ. ಸಿದ್ದಲಿಂಗಪ್ಪನವರಿಗೆ ಹನುಮಂತಪ್ಪ ಮತ್ತು ಹಾಲಪ್ಪರವರು ತಮ್ಮಂದಿರು ಎಂದರೆ ಸರಿ. ದಾವಾ ಆಸ್ತಿಗಳನ್ನು ಹೊರತು ಪಡಿಸಿ ಅವರ ಅಣ್ಣತಮ್ಮಂದಿರು ಬೇರೆ ಆಸ್ತಿಗಳನ್ನು ಪಾಲು ವಿಭಾಗ ಮಾಡಿಕೊಂಡು ಹಂಚಿಕೊಂಡಿರುತ್ತಾರೆ ಎಂದರೆ ಸರಿ. ಪಾಲು ವಿಭಾಗದಂತೆ

ಸದರಿಯವರ ಹೆಸರಿಗೆ ಖಾತೆಯಾಗಿರುತ್ತದೆ ಎಂದರೆ ಸರಿ. ಕೆಲವೊಂದು ಆಸ್ತಿಗಳು ಜಂಟಿ ಇರುವುದರಿಂದ ಹಾಲಪ್ಪ, ಮಂಜಪ್ಪ ಮತ್ತು ಹಾಲೇಶಪ್ಪನವರನ್ನು 9 ರಿಂದ 11 ನೇ ಪ್ರತಿವಾದಿಗಳನ್ನಾಗಿ ಮಾಡಿರುತ್ತೇನೆಂದರೆ ಸರಿ. ಈ ಪ್ರಕರಣದಲ್ಲಿ ನನ್ನ ಚಿಕ್ಕಪ್ಪ ಹಾಲಪ್ಪನವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

ಬಿಷ್ಟಪ್ಪನವರಿಗೆ ಹಾಲಪ್ಪ, ರುದ್ರಪ್ಪ ಮತ್ತು ಬಸವರಾಜಪ್ಪ ಎಂಬ 3 ಜನ ಮಕ್ಕಳು ಎಂದರೆ ಸರಿ. ಅವರ ಪೈಕಿ ಈಗ ಬಸವರಾಜಪ್ಪನವರು ಮೃತ ಪಟ್ಟಿದ್ದು ಆತನ ಹೆಂಡತಿ ಮಕ್ಕಳು ಜೀವಂತ ಇದ್ದಾರೆ ಎಂದರೆ ಸರಿ. ನಾನು ಈ ಪ್ರಕರಣದಲ್ಲಿ ಬಿಷ್ಟಪ್ಪನವರ ಮಕ್ಕಳಾದ ರುದ್ರಪ್ಪ ಮತ್ತು ಬಸವರಾಜಪ್ಪನವರ ಹೆಂಡತಿ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನನ್ನ ತಂದೆಯ ಸಹೋದರರು ವಿಭಾಗ ಮಾಡಿಕೊಂಡಾಗ ಸದರಿಯವರುಗಳಿಗೆ ಇಂತಿಷ್ಟು ಜಮೀನು ಇಂತಹ ಕಡೆ ಇರುತ್ತದೆ ಎಂದು ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ.

ದಾವಾ ಆಸ್ತಿ 5 ನೇ ಸ್ವತ್ತಾದ ಶೃಂಗಾರ ಭಾಗ್ ಗ್ರಾಮದ ಸರ್ವೆ ನಂ. 52 ರಲ್ಲಿರುವ 1 ಎಕರೆ 34 ಗುಂಟೆ ಜಮೀನು ಸಿದ್ದಲಿಂಗಪ್ಪ, ಬಿಷ್ಟಪ್ಪ ಮತ್ತು ಹನುಮಂತಪ್ಪನವರಿಗೆ ಹಕ್ಕು ಇರುತ್ತದೆ ಎಂದರೆ ಸರಿ. ದಾವಾ ಆಸ್ತಿ 5ನೇ ಸ್ವತ್ತಿನಲ್ಲಿ ಉತ್ತರ ದಿಕ್ಕಿಗಾದಂತೆ 9 ಪ್ರತಿವಾದಿಯ ತಂದೆ ಬಿಷ್ಟಪ್ಪನವರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ. 52ರ 5 ನೇ ಸ್ವತ್ತಿನಲ್ಲಿ ಉತ್ತರ ದಿಕ್ಕಿಗಾದಂತೆ ಯಾರಿಗೆ ಆಸ್ತಿ ಹೋಗಿದೆ ಎಂದರೆ ಯಾರಿಗೂ ಸರಿಯಾಗಿ ಹೋಗಿರುವುದಿಲ್ಲ.

ದಾವಾ ಆಸ್ತಿಯ ಐಟಮ್ ನಂ.5 ರಲ್ಲಿ ನಾನು ಮನೆ ಕಟ್ಟಿರುತ್ತೇನೆ ಎಂದರೆ ಸರಿ. ನಾವು ಕಟ್ಟಿರುವ ಮನೆಯು ಪಂಚಾಯಿತಿಯಲ್ಲಿ ಖಾತೆ ದಾಖಲಾಗಿರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ಐಟಮ್ ನಂ.5 ರ ಸ್ವತ್ತಿನಲ್ಲಿ ನಮ್ಮ ತಂದೆಯ ಕಾಲದಲ್ಲಿಯೇ ಮನೆ ಕಟ್ಟಿರುತ್ತೇವೆ. ಸದರಿ ಮನೆ ಕಟ್ಟಲು ದಾವಾ ಆಸ್ತಿಯ 5ನೇ ಸ್ವತ್ತಿನಲ್ಲಿ ಯಾರಿಗೆ ಯಾವ ಭಾಗದಲ್ಲಿ ಎಷ್ಟು ಎಷ್ಟು ಸೇರಬೇಕು ಎಂದು ಒಪ್ಪಿಗೆ ಏನಾದರೂ ನನ್ನ ತಂದೆಯ ಅಣ್ಣತಮ್ಮಂದಿರು ಬರೆದುಕೊಟ್ಟಿದ್ದಾರೆ ಎಂದರೆ ಯಾವುದೇ ಪತ್ರ ಬರೆದುಕೊಟ್ಟಿಲ್ಲ ಬಾಯಿ ಮಾತಿನ ಮುಖಾಂತರ ಮೂರು ಭಾಗ ಮಾಡಿರುತ್ತಾರೆ. ದಾವಾ ಆಸ್ತಿಯ 5ನೇ ಸ್ವತ್ತಿನಲ್ಲಿ ಉತ್ತರ ಭಾಗದ ಸ್ವತ್ತು ನಮಗೆ ಸೇರಿರುತ್ತದೆ ಎಂದು ಯಾವುದೇ ಪತ್ರ ಬರೆದುಕೊಟ್ಟಿರುವುದಿಲ್ಲ.

ದಾವಾ ಆಸ್ತಿಯ ಐಟಮ್ ನಂ.5 ರ ಸ್ವತ್ತಿನಲ್ಲಿ ನಮ್ಮ ಭಾಗಕ್ಕೆ ಸೇರಿರುವ 10 ಗುಂಟೆ ಜಮೀನು ಭೂಪರಿವರ್ತನೆ ಆಗಿರುತ್ತದೆ. 10 ಗುಂಟೆ ಜಮೀನು ಭೂಪರಿವರ್ತನೆ ಆಗಿರುವುದಕ್ಕೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರಪಡಿಸಿದ್ದೀರಾ ಎಂದರೆ ಸದರಿ ವಿಚಾರ ನನ್ನ ತಮ್ಮನಿಗೆ ತಿಳಿದಿರುತ್ತದೆ. ಯಾವ ವರ್ಷದಲ್ಲಿ 10 ಗುಂಟೆ ಜಮೀನು ಭೂಪರಿವರ್ತನೆ ಆಗಿರುತ್ತದೆ ಎಂದು ನಾನು ದಾಖಲೆ ನೋಡಿರುವುದಿಲ್ಲ ನನ್ನ ತಮ್ಮನಿಗೆ ತಿಳಿದಿರುತ್ತದೆ.

ದಾವಾ ಆಸ್ತಿಯ ಐಟಮ್ ನಂ.7 ರ ಸರ್ವೆ ನಂ. 33 ರ 3 ಎಕರೆ 7 ಗುಂಟೆಯ ಹೊಸಕೆರೆ ಗ್ರಾಮದ ಜಮೀನಿನಲ್ಲಿ ನನ್ನ ತಂದೆಯ 4 ಜನ ಸಹೋದರರಿಗೂ ಸಮನಾದ ಪಾಲು ಇದೆ ಎಂದರೆ ಸರಿ. ದಾವಾ ಆಸ್ತಿಯ ಐಟಮ್ ನಂ. 4 ರ ಸರ್ವೆ ನಂ. 31ಎ ನಲ್ಲಿರುವ 5 ಎಕರೆ ಜಮೀನಿನಲ್ಲಿ ಹನುಮಂತಪ್ಪ, ಬಿಷ್ಟಪ್ಪ ಮತ್ತು ಸಿದ್ದಲಿಂಗಪ್ಪನವರಿಗೆ ಮಾತ್ರ ಹಕ್ಕು ಇರುತ್ತದೆ ಎಂದರೆ ಸರಿ.

ನನ್ನ ತಂದೆಯ ಸಹೋದರರು ಜಮೀನನ್ನು ವಿಭಾಗ ಮಾಡಿಕೊಂಡಾಗ ನಾನೇ ಜುಬಾನಿ ಹಿಸ್ಸೆ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ, ನನ್ನ ತಂದೆಯ ಸಹೋದರರೇ ಮಾಡಿಸಿರುತ್ತಾರೆ. ದಾವಾ ಆಸ್ತಿಯ ಐಟಮ್ ನಂ.5 ರ ಸ್ವತ್ತಿನಲ್ಲಿ 10 ಗುಂಟೆ ಭೂಪರಿವರ್ತನೆಯಾಗಿರುವ ಜಮೀನು ಒಳಗೊಂಡಂತೆ ನನ್ನ ತಂದೆಯ ಸಹೋದರರಾದ ಸಿದ್ದಲಿಂಗಪ್ಪ, ಬಿಷ್ಟಪ್ಪ ಮತ್ತು ಹನುಮಂತಪ್ಪನವರಿಗೆ ಸಮಾನವಾದ ಹಕ್ಕು ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಐಟಮ್ ನಂ.5 ರ ಸ್ವತ್ತಿನಲ್ಲಿ ಹನುಮಂತಪ್ಪ ಮತ್ತು ಬಿಷ್ಟಪ್ಪನವರಿಗೆ ಯಾವುದೇ ಹಿಸ್ಸೆ ಹಕ್ಕು ಇರುವುದಿಲ್ಲ ನಮಗೆ ಸೇರಿರುತ್ತದೆ ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ನನ್ನ ತಮ್ಮನಿಗೆ ಗೊತ್ತಿರುತ್ತದೆ.

( ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ.ಚನ್ನಗಿರಿ.